ಕ್ರ.ಸ.	ಖಾಲಿಹುದ್ದೆಗಳ ವಿವರ	ಮಂಜೂರಿ	ಭರ್ತಿ	ಖಾಲಿ
1)	ದ್ವಿ.ದ.ಸಹಾಯಕ	15	11	04
2)	ಗ್ರಾಮ ಲೆಕ್ಕಿಗರು	39	32	07
3)	ಬೆರಳಚ್ಚುಗಾರ	01	–	01
4)	ಪರಿಚಾರಕರು	14	09	05

ಉ) ಇದೆ.

ಊ) ಆರ್ಥಿಕ ಮಿತವ್ಯಯದ ಆದೇಶ ಜಾರಿಯಲ್ಲಿದೆ. ಮೇಲೆ ಕಾಣಿಸಿದ ಖಾಲಿ ಹುದ್ದೆಗಳನ್ನು ಭರ್ತಿಮಾಡುವ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

662 (714) ಶ್ರೀ ಅಲ್ಕೋಡ್ ಹನುಮಂತಪ್ಪ (ದೇವದುರ್ಗ) : ಮಾನ್ಯ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನಲ್ಲಿರುವ ಪ್ರೇಕ್ಷಣೀಯ ಸ್ಥಳಗಳು ಯಾವುವು;

ಆ) ಹಾಗಿದ್ದಲ್ಲಿ, ಸದರಿ ಸ್ಥಳಗಳ ಅಭಿವೃದ್ಧಿಗೆ ಇಲಾಖೆಯ ವತಿಯಿಂದ ತೆಗೆದುಕೊಂಡ ಕ್ರಮಗಳೇನು;

ಇ) ಗಬ್ಬೂರು, ಚಂದನಕೆರೆ ಹಾಗೂ ಕ್ಯಾದಗೆರೆ ಮುಂತಾದ ಪ್ರೇಕ್ಷಣೀಯ ಸ್ಥಳಗಳನ್ನು ಅಭಿವೃದ್ಧಿಪಡಿಸಲು ತೆಗೆದುಕೊಂಡ ಕಾಮಗಾರಿಗಳು ಯಾವುವು;

ಈ) ಇಲ್ಲದಿದ್ದಲ್ಲಿ ಯಾವಾಗ ಈ ಪ್ರೇಕ್ಷಣೀಯ ಸ್ಥಳಗಳನ್ನು ಅಭಿವೃದ್ಧಿಪಡಿಸಲಾಗುವುದು;

ಉ) ಸದರಿ ಗ್ರಾಮಗಳಲ್ಲಿ ತಮ್ಮ ಇಲಾಖೆಯಿಂದ ಪ್ರೇಕ್ಷಕರಿಗಾಗಿ ಪ್ರವಾಸಿ ಮಂದಿರಗಳನ್ನು ನಿರ್ಮಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಊ) ಯಾವ ವರ್ಷದಿಂದ ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು;

ಶ್ರೀ ಡಿ. ಟಿ. ಜಯಕುಮಾರ್ (ಮಾನ್ಯ ಪ್ರವಾಸೋದ್ಯಮ ಸಚಿವರು) :

ಅ) ದೇವದುರ್ಗ ತಾಲ್ಲೂಕಿನಲ್ಲಿ ಗಬ್ಬೂರನ್ನು ಪ್ರೇಕ್ಷಣೀಯ ಸ್ಥಳವೆಂದು ಗುರುತಿಸಲಾಗಿದೆ.

ಆ) ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿಲ್ಲ.

ಇ) ಇಲ್ಲ.

ಈ) ಹೆಚ್ಚು ಪ್ರವಾಸಿಗರು ಭೇಟಿ ನೀಡುವ ಪ್ರಮುಖ ಪ್ರವಾಸಿ ಕೇಂದ್ರಗಳನ್ನು ಆದ್ಯತೆ ಮೇಲೆ ಅಭಿವೃದ್ಧಿಪಡಿಸಿದ ನಂತರ ಅನುದಾನದ ಲಭ್ಯತೆ ಮೇರೆಗೆ ಇತರೆ ಸ್ಥಳಗಳನ್ನು ಅಭಿವೃದ್ಧಿ ಪಡಿಸಲಾಗುವುದು.

ಉ) ಇಲ್ಲ

ಊ) ಉದ್ಭವಿಸುವುದಿಲ್ಲ.

664 (1612) ಶ್ರೀ ಆಲ್ಕೋಡ್ ಹನುಮಂತಪ್ಪ (ದೇವದುರ್ಗ) : ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಯಚೂರು ಜಿಲ್ಲೆ, ದೇವದುರ್ಗ ತಾಲ್ಲೂಕಿನ ಯುವಜನ ಸೇವೆ ಮತ್ತು ಕ್ರೀಡೆಗಳ ಯಾವ ಯಾವ ಯೋಜನೆಗಳಿಗೆ ಹಣ ಮಂಜೂರು ಮಾಡಲಾಗಿದೆ;

ಆ) ಖರ್ಚಾದ ಹಣ ಎಷ್ಟು;

ಇ) ಉಳಿದ ಹಣ ಎಷ್ಟು (ವಿವರವಾದ ಯೋಜನಾವಾರು ಮಾಹಿತಿ ನೀಡಿರಿ);

ಈ) ಯುವಜನ ಸೇವಾ ಇಲಾಖೆಯಿಂದ ದೇವದುರ್ಗ ತಾಲ್ಲೂಕಿನಲ್ಲಿ ಆಟದ ಮೈದಾನವನ್ನು ನಿರ್ಮಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಉ) ಹಾಗಿದ್ದಲ್ಲಿ, ಇದಕ್ಕೆ ಮಂಜೂರಾದ ಹಾಗೂ ಖರ್ಚಾದ ಹಣವೆಷ್ಟು;

ಊ) ಹಾಗಿದ್ದಲ್ಲಿ, ಮಂಜೂರು ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ;

ಋ) ಇದ್ದಲ್ಲಿ, ಇದಕ್ಕೆ ಬೇಕಾಗುವ ಜಮೀನು ಎಷ್ಟು (ವಿವರವಾದ ಮಾಹಿತಿ ನೀಡಿರಿ)?

ಶ್ರೀ ಜಬ್ಬಾರ್ ಖಾನ್ ಹೊನ್ನಳ್ಳಿ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು) :

ಅ) ಅ) ಕ್ರೀಡಾಕೂಟ ಮತ್ತು ರ್ಯಾಲಿಗಳಲ್ಲಿ ಭಾಗವಹಿಸುವವರಿಗೆ ಪ್ರಯಾಣ ಭತ್ಯೆ ಮತ್ತು ದಿನಭತ್ಯೆ ರೂ. 30,000

ಆ) ಮಂಡಲ/ತಾಲ್ಲೂಕು ಮಟ್ಟದ ಕ್ರೀಡಾಂಗಣ ನಿರ್ಮಾಣ ರೂ. 1,43,000

ಇ) ಒಳ ಕ್ರೀಡಾಂಗಣ ಮತ್ತು ಬಯಲು ರಂಗ ಮಂದಿರ ನಿರ್ಮಾಣ ರೂ. 7,000

ಈ) ಕ್ರೀಡಾ ಉತ್ತೇಜನ ಕೇಂದ್ರ ರೂ. 5,000

ಒಟ್ಟು ರೂ. **1,85,000**

ಆ) ರೂ. 30,000/–

ಇ) ಅ) ಮಂಡಲ/ತಾಲ್ಲೂಕು ಮಟ್ಟದ ಕ್ರೀಡಾಂಗಣ ನಿರ್ಮಾಣ ರೂ. 1,43,000

ಆ) ಒಳ ಕ್ರೀಡಾಂಗಣ ಮತ್ತು ಬಯಲು ರಂಗ ಮಂದಿರ ನಿರ್ಮಾಣ ರೂ. 7,000

ಇ) ಕ್ರೀಡಾ ಉತ್ತೇಜನ ಕೇಂದ್ರ ರೂ. 5,000

ಒಟ್ಟು ರೂ. **1,55,000**

ಈ) ದೇವದುರ್ಗ ತಾಲ್ಲೂಕಿನಲ್ಲಿ ತಾಲ್ಲೂಕು ಮಟ್ಟದ ಕ್ರೀಡಾಂಗಣ ನಿರ್ಮಾಣ ಯೋಜನೆಯು ಇಲಾಖೆಯಲ್ಲಿ ಜಾರಿಯಲ್ಲಿರುತ್ತದೆ.

ಉ) ನಿವೇಶನ ದೊರಕದೆ ಇರುವುದರಿಂದ ಕ್ರೀಡಾಂಗಣ ನಿರ್ಮಾಣ ಕಾರ್ಯವು ಪ್ರಾರಂಭವಾಗಿರುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ಋ) 400 ಮೀ. ಟ್ರಾಕ್ ಜೊತೆಗೆ ಇನ್ನಿತರೆ ಆಟಗಳಾದ ಫುಟ್ಬಾಲ್, ವಾಲಿಬಾಲ್, ಖೋಖೋ, ಕಬಡ್ಡಿ ಮತ್ತು ಬಾಸ್ಕೆಟ್‌ಬಾಲ್ ಮುಂತಾದ ಅಂಕಣಗಳು ನಿರ್ಮಿಸಲು ಕನಿಷ್ಟ 6 ಎಕರೆ ಜಮೀನು ಬೇಕಾಗುತ್ತದೆ.